**ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳ ಪೂರಕ ಕಟ್ಟಡ,**
**ನೃಪತುಂಗ ರಸ್ತೆ, ಬೆಂಗಳೂರು, 01**

ಪತ್ರ ಸಂಖ್ಯೆ: ಸ.ಶಿ.ಅ/ನಲಿ-ಕಲಿ/ಖಾ.ಶಾ. ವಿಸ್ತರಣೆ 1/20010-11 ದಿನಾಂಕ: 27.05.2010

**ಸುತ್ತೋಲೆ**

ವಿಷಯ : 2010-11ನೇ ಶೈಕ್ಷಣಿಕ ವರ್ಷದಲ್ಲಿ ಖಾಸಗಿ ಅನುದಾನಿತ/ಅನುದಾನರಹಿತ ಶಾಲೆಗಳಿಗೆ ನಲಿ-ಕಲಿ ವಿಸ್ತರಣೆ ಬಗ್ಗೆ.

ಉಲ್ಲೇಖ :. ಸರ್ಕಾರದ ಆದೇಶ ಸಂಖ್ಯೆ ಇಡಿ. 22. ಎಂಸಿಡಿ 2008 ಬೆಂಗಳೂರು, ದಿನಾಂಕ : 31.01.2008.

*****

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ಸರ್ಕಾರಿ ಆದೇಶದಂತೆ 2009-10ನೇ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳಲ್ಲಿ ಹಾಗೂ 22 ಬ್ಲಾಕ್‌ಗಳ ಉರ್ದು ಮಾಧ್ಯಮದ ಸರ್ಕಾರಿ ಶಾಲೆಗಳ 1 ಮತ್ತು 2ನೇ ತರಗತಿಗೆ ನಲಿ-ಕಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ.

ನಲಿ-ಕಲಿ ಬೋಧನಾ ವಿಧಾನವನ್ನು ಅಳವಡಿಸಿಕೊಳ್ಳಲು ಕೆಲವು ಖಾಸಗಿ ಶಾಲೆಯವರು ಸ್ವಇಚ್ಛೆಯಿಂದ ಮುಂದೆ ಬಂದಿರುತ್ತಾರೆ ಎಂದು ತಿಳಿದು ಬಂದಿದೆ. ಸ್ವಇಚ್ಛೆಯಿಂದ ನಲಿ-ಕಲಿ ಕಾರ್ಯಕ್ರಮವನ್ನು ತಮ್ಮ ಶಾಲೆಗಳ 1 ಮತ್ತು 2ನೇ ತರಗತಿಗಳಿಗೆ ಅನುಷ್ಠಾನಗೊಳಿಸಲು ಮುಂದೆ ಬರುವ ಶಾಲೆಗಳ ಪಟ್ಟಿಯನ್ನು ತುರ್ತಾಗಿ ದಿನಾಂಕ 05.06.2010ರೊಳಗೆ ಈ ಕಛೇರಿಗೆ ಕಳುಹಿಸುವುದು.

ತಮ್ಮ ನಂಬುಗೆಯ,

ನಿರ್ದೇಶಕರು
(ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ,
ಬೆಂಗಳೂರು

ಪ್ರತಿ :
1. ರಾಜ್ಯ ಯೋಜನಾ ನಿರ್ದೇಶಕರ ಆಪ್ತ ಶಾಖೆಗೆ ಮುಂದಿನ ಕ್ರಮಕ್ಕೆ.